C.C–1081 /2025

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 14.07.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಕೆ.ಪಿ ರವರಿಂದಃ**

**1.** ನನಗೆ ಕನ್ನಡ ಓದಲು ಬರುತ್ತದೆ. ಆದರೆ ಇಂಗ್ಲೀಷ್ ಓದಲು ಬರುವುದಿಲ್ಲ. ಸಾಗರದ ಆಜಾದ್ ರಸ್ತೆಯಲ್ಲಿ ನಮ್ಮ ಮನೆ ಇದೆ. ಅಲ್ಲಿ ಎಲ್ ಕೆ ಜಿ ಓದುವ ಮಕ್ಕಳ ಶಾಲೆ ಇಲ್ಲ. ನಿಪಿ–3 ಅನ್ನು ಬರೆಸುವಾಗ ಚೆಕ್ಕು ಹಾಗೂ ಹಿಂಬರಹವನ್ನು ನಮ್ಮ ವಕೀಲರಿಗೆ ನೀಡಿ ಅವರು ಕೇಳಿದ ಮಾಹಿತಿಯನ್ನು ನೀಡಿದ್ದೇನೆ. ಆರೋಪಿತನು ಎಷ್ಟು ಬಾರಿ ನನ್ನಿಂದ ಎಷ್ಟು ಮೊತ್ತದ ಹಣವನ್ನು ಕೈಗಡ ಸಾಲವಾಗಿ ಪಡೆದಿದ್ದ ಎಂದು ಈಗ ನನಗೆ ನೆನಪಿಲ್ಲ.

**2.** ಆರೋಪಿತನನ್ನು ಸಾಗರದ ನಮ್ಮ ಮನೆಯಲ್ಲಿ ಭೇಟಿ ಮಾಡಿದ್ದೇನೆ. ಆರೋಪಿತನಿಗೆ ಒಮ್ಮೆ 50 ಸಾವಿರ, 20 ಸಾವಿರ ಹಾಗೂ 5 ಸಾವಿರ ರೂ.ಗಳನ್ನು ನೀಡಿದ್ದೇನೆ. ಆ ಹಣವನ್ನು ನೀಡಿದ ದಿನಾಂಕ ಈಗ ನನಗೆ ನೆನಪಿಲ್ಲ. ಆರೋಪಿತನು ನನ್ನ ತಂದೆಯ ಸಂಬಂಧಿ. ಆರೋಪಿತನು ಮಂಗಳೂರಿನವನು ಎಂದರೆ ಸರಿ. ಆರೋಪಿತನು ಮತ್ತು ನಾನು ಯಾವತ್ತೂ ಭೇಟಿಯಾಗಿಲ್ಲ. ಆರೋಪಿತನು ಏನು ಕೆಲಸ ಮಾಡುತ್ತಾನೆ ಎಂದು ನನಗೆ ಗೊತ್ತು. ಆರೋಪಿತನು ನಮ್ಮ ಮನೆಯಲ್ಲಿ ದಿನಾಂಕ 05.01.2025 ರಂದು ಸಾಗರದಿಂದ ಅವನ ಮನೆಗೆ ಏನೋ ವಸ್ತುಗಳನ್ನು ಖರೀದಿ ಮಾಡಿಕೊಂಡು ಹೋಗಬೇಕು ಎಂದು ನನ್ನನ್ನು ಸಾಲವಾಗಿ 2 ಲಕ್ಷ ರೂ.ಗಳನ್ನು ಕೇಳಿದನು.

**3.** ಆರೋಪಿತನು ನನ್ನನ್ನು ಹಣ ಕೇಳಿದಾಗ ನಾನು, ನನ್ನ ತಂದೆ, ತಾಯಿ ಹಾಗೂ ತಮ್ಮ ಮನೆಯಲ್ಲಿ ಇದ್ದರು. ನನ್ನ ಹೆಸರಿನಲ್ಲಿ ಯೂನಿಯನ್ ಬ್ಯಾಂಕಿನಲ್ಲಿ ಒಂದೇ ಖಾತೆ ಇದೆ. ದಿನಾಂಕ 01.01.2025 ರಂದು 06.05.2025 ರವರೆಗೆ ಯೂನಿಯನ್ ಬ್ಯಾಂಕಿನಲ್ಲಿ ಒಂದೇ ಖಾತೆ ಇತ್ತು. ಬೇರೆ ಯಾವುದೇ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುವುದಿಲ್ಲ. ಆರೋಪಿತನಿಗೆ ನೀಡಿದ 2 ಲಕ್ಷ ನನಗೆ ಅಡಿಕೆ ಮಾರಾಟದಿಂದ ಬಂದಿತ್ತು. 6 ಕ್ವಿಂಟಲ್ ಅಡಿಕೆಯನ್ನು ಸಾಗರದಲ್ಲಿ ನಾನು ಮಾರಾಟ ಮಾಡಿ, ಆ ಹಣವನ್ನು ನಾನು ಮನೆಯಲ್ಲಿ ಇರಿಸಿಕೊಂಡಿದ್ದೆ. ನಾನು ಹೇಳಿದಂತೆ ಅಡಿಕೆ ಮಾರಾಟದಿಂದ ಯಾವುದೇ ಹಣ ಬಂದಿರಲಿಲ್ಲ ಎಂದರೆ ಸರಿಯಲ್ಲ.

**4.** ಮಂಗಳೂರಿನಲ್ಲಿರುವ ಶಫಿ ಎನ್ನುವವರು ಆರೋಪಿತನ ಸಂಬಂಧಿ ಎಂದರೆ ನನಗೆ ಗೊತ್ತಿಲ್ಲ. ಮಂಗಳೂರಿನ ಹಮ್ಜಾ ಮತ್ತು ನನಗೆ ಫೋನ್ ಸಂಪರ್ಕ ಇದೆ ಎಂದರೆ ಸರಿಯಲ್ಲ. ಹಮ್ಜಾ ರವರಿಂದ

ನಿಪಿ-1 ರ ಚೆಕ್ ಅನ್ನು ಪಡೆದು ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 05.01.2025 ರಂದು ನಿಪಿ-1 ರ ಚೆಕ್ಕಿನ ಸ್ಟಾಪ್ ಪೇಮೆಂಟ್ ಗಾಗಿ ಆರೋಪಿತನು ಸೌತ್ ಇಂಡಿಯನ್ ಬ್ಯಾಂಕ್, ಹಂಪನಕಟ್ಟೆ, ಮಂಗಳೂರು ರವರಿಗೆ ಅರ್ಜಿಯನ್ನು ನೀಡಿದರು ಎಂದರೆ ನನಗೆ ಗೊತ್ತಿಲ್ಲ. ಹಮ್ಜಾ ರವರು ಸವಣೂರಿನಲ್ಲಿ 2,30,000/- ರೂ.ಗಳಿಗೆ, ಉಡುಪಿಯಲ್ಲಿ 16,19,000/- ಹಾಗೂ ಈ ಪ್ರಕರಣದಲ್ಲಿ 2 ಲಕ್ಷ ರೂ.ಗಳಿಗೆ ಬೇರೆ ಬೇರೆಯವರ ಮೂಲಕ ಆರೋಪಿತನ ವಿರುದ್ಧ ಚೆಕ್ ಬೌನ್ಸ್ ಕೇಸುಗಳನ್ನು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ.

**5.** ಹಮ್ಜಾ ರವರು ನನ್ನ ಸಂಬಂಧಿ ಮತ್ತು ವಿಶ್ವಾಸಿಯಾಗಿದ್ದು, ಹಮ್ಜಾ ರವರು ನೀಡಿದ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಆರೋಪಿತನ ವಿರುದ್ಧ ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಫಿ ಮತ್ತು ಹಮ್ಜಾ ನ ಹೆಂಡತಿ ವಹೀದಾ ರವರು ಶೂ ಷೋರೂಂ ಅನ್ನು ಪಾಲುದಾರಿಕೆಯಲ್ಲಿ ನಡೆಸುತ್ತಿದ್ದು, ಆ ವ್ಯವಹಾರ ನಷ್ಟವಾಗಿದ್ದರಿಂದ ಪುನಃ ಮಾಲನ್ನು ತಂದು ಹಾಕಲು ಶಫಿ ರವರಿಗೆ ಹಣದ ಅವಶ್ಯಕತೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಬೇರೆ ರಾಜ್ಯಗಳಲ್ಲಿ ತನಗೆ ಪರಿಚಯಸ್ಥರು ಇರುವುದರಿಂದ ಅಲ್ಲಿಂದ ಶೂ ರೂಂಗೆ ಮಾಲನ್ನು ತಂದು ಕೊಡುತ್ತೇನೆ, ಆದ್ದರಿಂದ ಹಣ ಕೊಡು ಎಂದು ಆರೋಪಿತನನ್ನು ಶಫಿ ರವರು ಕೇಳಿದರು ಎಂದರೆ ನನಗೆ ಗೊತ್ತಿಲ್ಲ.

**6.** ನಿಪಿ-1 ರ ಚೆಕ್ ಅನ್ನು ನಗದೀಕರಣಕ್ಕಾಗಿ ಹಾಜರು ಪಡಿಸುವ ಮೊದಲು ಆರೋಪಿತನು ಕಾಪು ಪೋಲಿಸ್ ಠಾಣೆ, ಉಡುಪಿ ಇಲ್ಲಿ ದೂರನ್ನು ನೀಡಿದ್ದನು ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.